ಎಂ ವಿ ಸಿ ನಂ. 374/2022
ಆರ್.ಡಬ್ಲ್ಯು- 2

ದಿನಾಂಕಃ 25-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ** ಎದುರುದಾರರ ಪರ ಶ್ರೀ. ವಿ ಎಸ್ ಎ ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ವಿಮಾ ಪಾಲಸಿಯ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಆರ್-2 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಲು ಪ್ರಾರ್ಥಿಸುತ್ತೇನೆ.

ಪಾಟೀಸವಾಲುಃ- ಅರ್ಜಿದಾರರ ಪರ ಶ್ರೀ. ಬಿ ಸಿ ಕೆ ವಕೀಲರಿಂದ.

ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಅಪಘಾತಕ್ಕೆ ಸಂಬಂಧಿಸಿದಂತೆ ಮಹೇಶ ಉರ್ಫ ಮಾಯಪ್ಪ ತಂದೆ ಸಹದೇವಪ್ಪ ಜೋಗಿ ಇವರ ವಿರುದ್ಧ ಅಪಘಾತಪಡಿಸಿರುವುದಾಗಿ ಆಪಾದಿಸಿ ಪ್ರ.ವ.ವ. ದಾಖಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಅದು ಸುಳ್ಳಾಗಿ ದಾಖಲು ಆಗಿರುತ್ತದೆ ಎಂದು ನುಡಿಯತ್ತಾರೆ. ತನಿಖಾಧಿಕಾರಿಗಳು ಅಪಘಾತವು ಸದರಿ ಮಹೇಶ ಈತನ ದುಡುಕುತನದ ವಾಹನ ಚಾಲನೆಯಿಂದ ಆಗಿರುವುದಾಗಿ ಆಪಾದಿಸಿ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಪೊಲೀಸರು ಸರಿಯಾಗಿ ತನಿಖೆ ಮಾಡದೇ ದೋಷಾರೋಪಣೆ ಪಟ್ಟಿ ಸಲ್ಲಿಸಿರುವುದಾಗಿ ನುಡಿಯುತ್ತಾರೆ. ನಮ್ಮ ವಿಮಾ ಕಂಪನಿಯಿಂದ ಅಪಘಾತದ ಕುರಿತು ವಿಶೇಷವಾದ ತನಿಖೆ ಕೈಗೊಂಡಿಲ್ಲ. ಸಾಕ್ಷಿ ಅಪಘಾತಕ್ಕೆ ಸಂಬಂಧಿಸಿದಂತೆ ಕಾಗದ ಪತ್ರಗಳನ್ನು ಆಸ್ಪತ್ರೆಯಿಂದ ಈ ನ್ಯಾಯಾಲಯದ ಆದೇಶದ ಪ್ರಕಾರ ಕರೆಯಿಸಿ ಪಡೆದುಕೊಂಡಿರುವುದಾಗಿ ನುಡಿಯುತ್ತಾರೆ. ದಿನಾಂಕ 11-05-2021 ರಂದು ನಿಪಿ-19 ರಂತೆ ಮೃತ ಈರವ್ವ ಇವರು ರಸ್ತೆ ಅಪಘಾತದ ಹಿನ್ನಲೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಸ್ಪತ್ರೆಯ ಹಿಂದಿನ ದಾಖಲೆಗಳು ವ್ಯತಿರಿಕ್ತವಾಗಿದ್ದು ಅವು ರಸ್ತೆ ಅಪಘಾತಕ್ಕೆ ಸಂಬಂಧಿಸಿದ್ದು ಅಲ್ಲ ಎಂದು ಹೇಳುತ್ತವೆ ಎಂದು ನುಡಿಯುತ್ತಾರೆ. ನಿಪಿ-19 ರಂತೆ ಚಿಕಿತ್ಸೆ ಪಡೆದುಕೊಂಡ ನಂತರ ನಿಪಿ-20 ರಂತೆ ಮೃತ

ಈರವ್ವ ಇವರು ಕೀಮ್ಸ್ ಆಸ್ಪತ್ರೆಯಲ್ಲಿ ರಸ್ತೆ ಅಪಘಾತದ ಹಿನ್ನಲೆಯ ಗಾಯಕ್ಕೆ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಸ್ಪತ್ರೆಯ ಹಿಂದಿನ ದಾಖಲೆಗಳು ವ್ಯತಿರಿಕ್ತವಾಗಿದ್ದು ಅವು ರಸ್ತೆ ಅಪಘಾತಕ್ಕೆ ಸಂಬಂಧಿಸಿದ್ದು ಅಲ್ಲ ಎಂದು ಹೇಳುತ್ತವೆ ಎಂದು ನುಡಿಯುತ್ತಾರೆ.

2. ನನಗೆ ನಿಆರ್-1 ದಾಖಲೆಯ ಬಗ್ಗೆ ಮಾಹಿತಿ ಗೊತ್ತಿರುತ್ತದೆ. ನಿಆರ್-1 ನಾನ್ ಎಮ್ ಎಲ್ ಸಿ ದಾಖಲೆ ಇರುತ್ತದೆ. ನಿಆರ್-1 ರ ಮೇಲೆ ರಜಿಸ್ಟರ್ ಬುಕ್ ನಂಬರ ಇಲ್ಲ, ಅದರ ಪುಟ ಸಂಖ್ಯೆ ಇಲ್ಲ ಎಂದರೆ ಸರಿ. ನಿಆರ್-1 ದಾಖಲೆಗೆ ಯಾವುದೇ ಬೆಲೆ ಇಲ್ಲ ಎಂದರೆ ಸರಿಯಲ್ಲ. ಅಪರಾಧ ವಾಹನಕ್ಕೆ ನಮ್ಮ ವಿಮಾ ಕಂಪನಿಯಿಂದ ವಿಮೆ ವ್ಯಾಪ್ತಿ ಇತ್ತು ಎಂದರೆ ಸರಿ. ಅದು ಬಂಡಲ್ಡ ಪಾಲಸಿ ಎಂದರೆ ಸರಿ. ಒಂದು ವರ್ಷಕ್ಕೆ ಸಂಬಂಧಿಸಿದಂತೆ ಬಂಡಲ್ಡ ಪಾಲಸಿ ವಾಹನದ ಜಕಂ 3 ನೇ ಪಕ್ಷಗಾರ ಹಿಂಬದಿ ಸವಾರ ಇವರ ಹೊಣೆಗಾರಿಕೆಯನ್ನು ಹೊಂದಿರುತ್ತದೆ ಎಂದರೆ ಸರಿ. ನಿಆರ್-2 ನಮ್ಮ ಮತ್ತು ವಾಹನದ ಮಾಲೀಕರ ನಡುವಿನ ಒಡಂಬಡಿಕೆ ಎಂದರೆ ಸರಿ. ನಿಆರ್-2 ಕ್ಕೆ ಅರ್ಜಿದಾರರು 3 ನೇ ಪಕ್ಷಗಾರರು ಎಂದರೆ ಸರಿ. ದ್ವಿಚಕ್ರ ವಾಹನದ ಚಾಲಕನಿಗೆ ವಾಹನ ಚಾಲನೆ ಪರವಾನಿಗೆ ಪತ್ರ ಇತ್ತು ಆದ್ದರಿಂದ ನಮ್ಮ ವಿಮಾ ಕಂಪನಿಯವರು ಅರ್ಜಿದಾರರಿಗೆ ಪರಿಹಾರ ನೀಡುವ ಹೊಣೆಗಾರಿಕೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).